ಕಪ್ಪು ಕಪ್ಪಾಗಿ ಹೊಳೆಯುತ್ತಿದ್ದವು.

ಮಣಿಪುರದ ಜೋಯ್ ಸಿಂಗ್ ಅಗ್ಗಿಷ್ಟಿಕೆಯ ಮಧ್ಯೆ ಜೋತುಬಿದ್ದ ಹಂದಿಮಾಂಸದ ತುಣುಕುಗಳನ್ನು ಒಂದೊಂದೇ ಎಸಳುಗಳಾಗಿ ಬಿಡಿಸಿ ತಿನ್ನುತ್ತಾ ಜೋರಾಗಿ ಕೂಗಿದ. 'ಬದ್ಮಾಶ್ ನಿನ್ನ ಚಾಚಾನನ್ನು ನಾನೇ ಕೊಂದು ಈಗ ಬಂದೆ. ಈ ದಿನ ನುಸುಳುಕೋರರು ಅವನ ಸಹಾಯದಿಂದಲೇ ತಂತಿ ಹಾರಿ ಬರುತ್ತಿರುವಾಗಲೇ ನನ್ನ ಬುಲ್ಲೆಟುಗಳು ನುಸುಳುಕೋರರ ಜೊತೆ ನಿನ್ನ ಚಾಚಾನನ್ನು ಸುಟ್ಟು ಚಿಂದಿ ಮಾಡಿದವು. ಅವನ ರಕ್ತಮಾಂಸ ಮಜ್ಜೆಗಳೆಲ್ಲವೂ ನನ್ನ ಮೇಲೆ ಅಭಿಷೇಕ ಮಾಡಿದಂತೆ ಸಿಡಿದಿದ್ದವು. ಒಂದು ವೇಳೆ ನೀನು ಹೀಗೆ ಚಿಂತಾಕ್ರಾಂತನಾಗುತ್ತಿ ಎಂದಾದರೆ ನನ್ನ ಮೇಲೆ ಬಿದ್ದಿದ್ದ ಮಾಂಸ ಮಜ್ಜೆಗಳನ್ನು ನಿನಗೆ ಕೊಡುತ್ತಿದ್ದೆ, ನೀನು ಅವುಗಳನ್ನು ಒಂದು ಮಡಿಕೆಯಲ್ಲಿ ಹಾಕಿ ಝೀಲಂ ನದಿಗೆ ಬಿಟ್ಟು ಶ್ರಾದ್ಧ ಮಾಡಬಹುದಿತ್ತು' ಎಂದು ಗಹಗಹಿಸಿ ನಕ್ಕಿದ್ದ. ಎಂಥಾ ಉಡಾಫೆ ಮಾತು. ಮತ್ತೆ ರಮ್, ವೋಡ್ಕಾಗಳ ಬುರುಡೆ ಬಿಚ್ಚುತ್ತಾ ಜೋಯ್, 'ಬಾ ಬಾ ನಿನಗೆ ಬಿರ್ಯಾನಿ ತಿನ್ನಿಸುತ್ತೇನೆ' ಎಂದು ಕೂಗಿದ್ದ. ಅವನ ಜೊತೆ ಮಿಜೋರಾಂನ ವಿಲಿಯಂ, ಮೇಘಾಲಯದ ಡೆಂಗ್, ಬಂಗಾಳದ ಶುಭಾಂಕರ್ ಎಲ್ಲರೂ ಇದ್ದರು. ಜೋಯ್ ಇನ್ನೂ ಮಾತಾಡಿದ್ದು ಹಾಡಿದ್ದು ಆ ಹುಳಿಮಿಶ್ರಿತ ಸೇಬು, ಪ್ಲಮ್ ಪೀಚುಗಳ ಮಧ್ಯ ಒಂದಾಗಿತ್ತು. ಅವನ ತಮಾಷೆ ಮಿತಿಮೀರಿತ್ತು.

ಅವನ ಹಿಂದಿಯ ಗಾನ ಹೀಗಿತ್ತು...

**ನಮ್ಮಒಬ್ಬನಿದ್ದಾನೆ ದೇಶದ್ರೋಹಿ**
**ಅವನು ಪಾಕಿಸ್ತಾನಿಯೊಬ್ಬನ ಸ್ನೇಹಿ**
**ಇವನಿಗೆ ಅವನದೇ ಚಿಂತೆ**
**ಅವನನ್ನು ಮಾಡಿದ್ದೇನೆ ಇವನು**
**ಅಲ್ಲಿ ಹರಿದ ಪಂಚೆ**
**ಇವನಿಗೆ ಅವನಾಗುತ್ತಾನೆ ಚಾಚಾ**
**ನಮ್ಮ ದೇಶಕ್ಕೆ ಇವನೆಷ್ಟು ಸಾಚಾ?**

ಎನ್ನುವ ಹಾಡು ಬೆಟ್ಟಗುಡ್ಡಗಳ ಮಧ್ಯೆ ಒಂದಾಗಿ ಪ್ರತಿಧ್ವನಿಸುತ್ತಿತ್ತು, ನೀರ್ಗಲ್ಲುಗಳು ಉರುಳುತ್ತಿದೆಯೋ ಎನ್ನುವಂತೆ ಪ್ರತಿಧ್ವನಿ ಪದೇಪದೇ ಹಾಡುತ್ತಿತ್ತು. ದೂರದ ಬೆಟ್ಟಗಳು ರಜತಾದ್ರಿಯಂತೆ ಆ ಬೆಳ್ದಿಂಗಳಲ್ಲಿ ಹೊಳೆಯುತ್ತಿದ್ದವು. ಇದೆಲ್ಲ ನಡೆದಾಗ ನಾನು ಸ್ವಲ್ಪ ದೂರದಲ್ಲೇ ಇದ್ದೆ. ತಾನು ಇದ್ದುದ್ದು ಅದೇ ಡೇರೆಯಲ್ಲಿಯೇ. ಕಾಲು ಮಡಚಿಕೊಂಡು ಮಲಗಿದವನಿಗೆ ಅವನ ಹಾಡುಗಳ ಮೂಲಕ ಕರೆಯುವ ಉದ್ರೇಕಕಾರಿ ಆಹ್ವಾನ, ಅಸಹ್ಯ ಮತ್ತು ಭಯ ಹುಟ್ಟಿಸಿತ್ತು.

ಈ ಊರು ಕರ್ಫ್ಯೂ ಘೋಷಿಸಿಕೊಂಡು ನೇಣಿಗೇರಿದ್ದರೆ, ಸುತ್ತಮುತ್ತ ಹಳ್ಳಿಗಳು ಶಾಂತ ಸ್ಥಿತಿಯಲ್ಲಿ ಮಲಗಿದ್ದವು. ನಾನು ನಿರ್ಲಿಪ್ತನಾಗಿ ದೂರವುಳಿದರೂ ಅವರು ಕೇಳುವವರೇ ಅಲ್ಲ ಎಂದು ತನಗೂ ಗೊತ್ತು, ಹಾಡು ಹೇಳಿ ಹೇಳಿ ಅವನ ಗಂಟಲು ಶೋಷಣೆಯಾಯಿತೋ, ಮೆಲಕು ನೋಯಿತೋ ನೇರವಾಗಿ ತನ್ನನ್ನು ಕರೆಯಲು ದಾಂಗುಡಿ ಇಟ್ಟ. ಅರೆ ಶರಣ ಬಾರೋ..... ಶರಣ್ ಬಾರೋ..... ಎನ್ನುವ ಒಕ್ಕೊರಲಿನ ಧ್ವನಿಗಳು ಮತ್ತೆ ಬಾರಲೋ ಬಾರಲೋ ಎನ್ನುವ ಘೋಷಗಳು.. ಒಂದೆರಡು ಧ್ವನಿಗಳು ಮಾತ್ರ ಶರಣಕುಮಾರ್ ನಿಷ್ಟಿ ಬನ್ನಿ ಹೊರಗೆ ಎನ್ನುತ್ತಿದ್ದವು ಹಿಂದಿಯಲ್ಲಿ. ಬರುವುದೋ ಬೇಡವೋ ಭಾಗವಹಿಸುವುದೋ ಬೇಡವೋ? ಏಕೆಂದರೆ ಈ ವಿಕ್ಷಿಪ್ತ ಜೋಯ್ ನನ್ನನ್ನು ಮುಕ್ಕಿಮುಕ್ಕಿ ತಿನ್ನುವುದರಲ್ಲಿ ಸಂದೇಹವಿಲ್ಲ. ಇಷ್ಟಕ್ಕೂ ಆ ಆಹ್ವಾನಿಸುತ್ತಿರುವ ಧ್ವನಿಗಳು ಅಪೇಕ್ಷಣಿಯವೋ ಅಥವಾ ಅವಮಾನದ ಹಾದಿಗೆ ತಳ್ಳುವಂತಹವೋ? ಆದರೂ ಹೋಗಲೇಬೇಕಾಗಿತ್ತು. ತಾನು ಸಂಘ ಜೀವಿಯಲ್ಲವೆ? ಅವರಿಲ್ಲದೆ ಬದುಕಲು ಸಾಧ್ಯವೇ ಇಲ್ಲ. ಅಲ್ಲಿ ತನ್ನನ್ನು ಪ್ರೀತಿಸುವ ಶುಭಾಂಕರ ಇದ್ದನಲ್ಲ. ದೂರದ ಬೆಟ್ಟದಿಂದ ಧುಮುಕುವ ಆ ಧಡಲ್ ಬಡಲ್ ಶಬ್ದಗಳು ನೀರ್ಗಲ್ಲುಗಳವೇ ಇರಬಹುದು. ಹೊರಗೆ ಹೋಗಲೇಬೇಕಾಗಿತ್ತು. ಹೊರಬಂದೆ. ಅವರ ಚೀರಾಟ ಮುಗಿಲು ಮುಟ್ಟಿತ್ತು. 'ಶರಣ್ ಮಹಾರಾಜ್ ಕೀ ಜೈ, ಬೋಲೋ ಶರಣ್ ಮಹಾರಾಜ್ ಕೀ ಜೈ, ದೇಶದ್ರೋಹಿ ಶರಣ್ ಮಹಾರಾಜ್ ಕೀ ಜೈ'.

ಹೊರಬಂದ ತಕ್ಷಣವೇ 'ಹೋ ಹೋ ಶರಣ್ ಆಯೇ..... ಶರಣ್ ಆಯೇ...' ಆಗಿಂದಾಗಲೇ ದೂರದ ಕಂಟಿಯಲ್ಲಿದ್ದ ಅದೊಂದು ಸೇಬಿನ ಮರದ ದಿನ್ನೆಯನ್ನು ಉರುಳಿಸಿಕೊಂಡು ಬಂದು ಅಲ್ಲಿ ನೆಡಲಾಯಿತು. ಅದರ ಮೇಲೆ ತನ್ನನ್ನು ಬಲಾತ್ಕಾರವಾಗಿ ಕೂಡಿಸಲಾಯಿತು ಶರಣ್‌ಗೆ ಈಗ ಸನ್ಮಾನ ಕಾರ್ಯಕ್ರಮ ಎಂದು ಹೇಳಲಾಯಿತು. ಕಾರ್ಯಕ್ರಮಕ್ಕೆ ಮುಂಚಿತವಾಗಿ ಮಾತಾಡಬೇಕಲ್ಲ,